Mr. SPEAKER.—The Question is: "That the debate on the non-Official Resolution changing of the present name of the Mysore State to "Karnataka" be adjourned *sine die*."

The motion was adopted.

ಶ್ರೀ ಎ. ಜೆ. ದೊಡ್ಡಮೇಟಿ.—ಈಗ ನಾನು ಈ ನಿರ್ಣಯವನ್ನು ಮುಂಡಿನುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೂವ್ ಮಾಡದೆ ಹೋದರೆ ಮುಂದೆ ಇದರ ಪರಿಣಾಮ ವೇನಾಗುತ್ತದೆ? ಅಧ್ಯಕ್ಷರಲ್ಲಿ ಈಗಾಗಲೇ ಬಹಳ ಜಡ್ಜ್‌ಮೆಂಟ್‌ಗಳಿರುತ್ತವೆ ಎಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು.—ನನ್ನಲ್ಲ ಬಹಳ ಜಡ್ಜ್‌ಮೆಂಟ್‌ಗಳು ಈಗಾಗಲೇ ರೆಡಿಯಾಗಿರುತ್ತವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.— ಈ ನಿರ್ಣಯ ಮುಂದೆ ರ್ಯಾಪ್ಸ್ ಆಗುತ್ತದೆಯೇ ಅಥವಾ ಜೀವಂತವಾಗಿ ಉಳಿಯುತ್ತದೆಯೇ? ಏನೆಂಬುದನ್ನು ನಾನು ತಿಳಿದುಕೊಳ್ಳಬೇಕಾಗಿತ್ತು.

Mr. SPEAKER.—Resolution No. 2. The Hon'ble Member, concerned, is not present here. Resolution No. 3., Sri J. L. Kabadi may move it.

Sri J. L. KABADI.—I do not propose to move the resolution.

Mr. SPEAKER.—Resolution Nos. 1, 2, 3, 4, and 5, Members not present

Sri V. S. PATIL.—I will move Resolution No. 6 on a later date.

RESOLUTION No. 7:

re: Taking steps to improve administration and supervision of Primary Education in rural areas.

ಶ್ರೀ ಟಿ. ಮಾದಯ್ಯಗೌಡ.—(ರಾಮನಗರ) ಸ್ವಾಮಿ, ನನ್ನ ಹೆಸರಿನಲ್ಲಿರತಕ್ಕ ನಿರ್ಣಯ ಈ ರೀತಿ ಇದೆ:—

> "This Assembly is of opinion that Government should take early steps to improve administration and supervision of Primary Education particularly in rural areas, so as to improve efficiency".

Mr. SPEAKER.—Resolution moved:

> "This Assembly is of opinion that Government should take early steps to improve administration and supervision of Primary Education particularly in rural areas, so as to improve efficiency".

† ಶ್ರೀ ಟಿ. ಮಾದಯ್ಯಗೌಡ.—ಸ್ವಾಮಿ, ಈ ಮುಖ್ಯವಾದ ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸುವುದಕ್ಕೆ ನನಗಾದರೂ ತುಂಬ ಸಂತೋಷವಾಗುತ್ತದೆ. ದೇಶದಲ್ಲಿ ಶಿಕ್ಷಣ ಪ್ರಸಾರ ವನ್ನತಕ್ಕ ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಅದೂ ಅಲ್ಲದೆ ಮುಂದುವರಿಯುತ್ತಿರತಕ್ಕ ಈ ನಮ್ಮ ನಾಡಿನಲ್ಲಿ ಬಹು ಜಾಗ್ರತೆಯಿಂದ ಎಲ್ಲ ಪ್ರಜೆಗಳೂ ಕೂಡ ವಿದ್ಯಾವಂತರಾಗಿ, ಶಿಕ್ಷಕರಾಗಿ, ತಿಳುವಳಿಕೆಯ ಮಟ್ಟವನ್ನು ಅತ್ಯುತ್ತಮ ರೀತಿಯಲ್ಲಿ ಹೊಂದಲು ಎಲ್ಲ ಅವಕಾಶವಿದೆ, ಸ್ಥಳಾವಕಾಶ ವಿದೆ. ಎಲ್ಲಕಿಂತಲೂ ಹೆಚ್ಚಾಗಿ ಈ ಪ್ರಜಾಸತ್ತಾತ್ಮಕ ಪದ್ಧತಿಯನ್ನು ಎಲ್ಲರಲ್ಲಿಯೂ ಕೂಡ ಬೆಳೆಸತಕ್ಕ ಶಕ್ತಿ ಹೆಚ್ಚಬೇಕಾದ್ದು ಅನಿವಾರ್ಯ. ಈ ದೃಷ್ಟಿಯಿಂದ ಎಲ್ಲ ಮಟ್ಟದ ಶಿಕ್ಷಣಕ್ಕಿಂತಲೂ ಅತ್ಯಂತ ಮುಖ್ಯವಾದ ಪ್ರಾಥಮಿಕ ಶಿಕ್ಷಣವು ಸರ್ವಸಾಧಾರಣವಾಗಿ ದೇಶದಲ್ಲಿ ಪ್ರತಿಯೊಬ್ಬ ಮಕ್ಕಳಿಗೂ ದೊರೆಯುವಂತೆ ಮಾಡಿರತಕ್ಕ ನಮ್ಮ ಮೈಸೂರು ಸರ್ಕಾರ ಅಭಿನಂದನೀಯವಾಗಿದೆ. ಅದರ ಉದ್ದೇಶವನ್ನು

(ಶ್ರೀ ಜಿ. ಮಾದೇಗೌಡ)

ನಾನು ಬಹಳವಾಗಿ ಮೆಚ್ಚುತ್ತೇನೆ. ಈಗ ಸುಮಾರು ಒಂದೆರಡು ವರ್ಷಗಳ ಹಿಂದೆ, 1961ನೆಯ ಇಸವಿ ಆಗಸ್ಟ್ ತಿಂಗಳಲ್ಲಿ ಪ್ರಾಥಮಿಕ ಕಡ್ಡಾಯ ಶಿಕ್ಷಣವನ್ನು ದೇಶದಲ್ಲಿ ಅನುಷ್ಠಾನಕ್ಕೆ ತಂದಿದ್ದಾರೆ. ಇದು ಬಹಳ ಅಚ್ಚುಮೆಚ್ಚಾಗಿ ನಡೆಯಬೇಕು. ದೇಶದ ಸಮಸ್ತ ಹೆಣ್ಣು, ಗಂಡು ಮಕ್ಕಳಿಗೆಲ್ಲ, ಮೂಲೆ ಮೂಲೆಯಲ್ಲಿರುವ ಎಲ್ಲ ಮಕ್ಕಳಿಗೂ ಲಭ್ಯವಾಗಬೇಕು, ದೇಶದಲ್ಲಿ ಅನಕ್ಷರಸ್ಥರು ಇಲ್ಲವೇ ಇಲ್ಲವೆನ್ನುವಂತಾಗಬೇಕು, ಎನ್ನುವಂಥ ಉದ್ದೇಶ ಮೆಚ್ಚುತಕ್ಕದ್ದೇ ಆಗಿದೆ. ನಮ್ಮ ಭರತ ಖಂಡದ ಜನಗಳಲ್ಲಿ ಎಲ್ಲಿಯವರೆಗೆ ಅನಕ್ಷರತೆಯಿರುತ್ತದೆಯೋ ಅಲ್ಲಿಯವರೆಗೂ ದೇಶ ಪ್ರಗತಿಗೆ ಬರಲಾರದು ಎನ್ನುವುದು ಎಲ್ಲ ತಜ್ಞರ ಅಭಿಪ್ರಾಯವಾಗಿದೆ. ಆ ದೃಷ್ಟಿಯಿಂದ ನಮ್ಮ ಮುಂದಿರತಕ್ಕ ಈ ಕಡ್ಡಾಯ ಪ್ರಾಥಮಿಕ ಶಿಕ್ಷಣ ಯಶಸ್ವಿಯಾಗಿ, ಅಚ್ಚುಮೆಚ್ಚಾಗಿ ನಡೆಯಬೇಕು ಎನ್ನುವ ಅಭಿಪ್ರಾಯದಿಂದ ಈದಿನ ಕೆಲವು ಅಭಿಪ್ರಾಯಗಳನ್ನು ಸರ್ಕಾರದವರ ಮುಂದೆ ಇಡಬೇಕೆಂದು ನಾನು ಪ್ರಯತ್ನ ಮಾಡುತ್ತಿದ್ದೇನೆ.

ಮೈಸೂರು ದೇಶದಲ್ಲಿ ಪ್ರಾಥಮಿಕ ಶಿಕ್ಷಣ ಎಲ್ಲ ಭಾಗಗಳಲ್ಲಿಯೂ ಒಂದೇತರಹ ಇಲ್ಲ, ನಮ್ಮ ಮಾನ್ಯ ವಿದ್ಯಾಮಂತ್ರಿಗಳಾದರೂ ಮೈಸೂರು ದೇಶದ ಪ್ರತಿಯೊಂದು ಭಾಗದಲ್ಲಿಯೂ, ಎಲ್ಲ ವಿಧದಲ್ಲಿಯೂ ಏಕರೂಪತೆಯನ್ನು ಮಾಡಬೇಕೆಂದು ಹೊರಟಿರತಕ್ಕವರು. ಆದರೆ ಈ ಪ್ರಾಥಮಿಕ ವಿದ್ಯಾಭ್ಯಾಸ ಏಕರೂಪವಾಗಿ ಪ್ರಾರಂಭವಾಗುವುದಕ್ಕೆ ಯಾವ ಪ್ರಯತ್ನಗಳೂ ಆಗಿಲ್ಲ. ದೇಶದ 19 ಜಿಲ್ಲೆಗಳಲ್ಲಿಯೂ ಪ್ರಾಥಮಿಕ ಶಿಕ್ಷಣದ ಕಾನೂನನ್ನು ಜಾರಿಗೆ ತಂದಿದ್ದರೂ ಸಹ ಬೇರೆ ಬೇರೆ ಭಾಗದಲ್ಲಿ ಬೇರೆ ಬೇರೆ ರೀತಿಯಲ್ಲಿ ಪ್ರಾಥಮಿಕ ಶಿಕ್ಷಣ ನಡೆಯುತ್ತಿದೆ. ಹಳೆಯ ಮೈಸೂರಿನಲ್ಲಿ ನೇರವಾಗಿ ಸರ್ಕಾರದಿಂದಲೇ ಆಡಳಿತ ನಡೆಯುತ್ತಿದ್ದರೆ ಬಳ್ಳಾರಿಯಲ್ಲಿ ಒಂದು ತರಹ ನಡೆಯುತ್ತಿದೆ, ದಕ್ಷಿಣ ಕನ್ನಡ, ಕೊಳ್ಳೇಗಾಲಗಳಲ್ಲಿ ಒಂದು ತರಹ ನಡೆಯುತ್ತಿದೆ, ಬೊಂಬಾಯಿ ಮತ್ತು ಹೈದರಾಬಾದ್ ಪ್ರಾಂತದ ಜಿಲ್ಲೆಗಳಲ್ಲಿ ಒಂದೊಂದು ತರಹ ನಡೆಯುತ್ತಿದೆ. ಪ್ರಾಥಮಿಕ ಶಿಕ್ಷಣ ಇನ್ನೂ ಏಕರೂಪತೆಗೆ ಬಂದಿಲ್ಲ. ಅನೇಕ ಕಡೆ ನೇರವಾಗಿ ಸರ್ಕಾರದಿಂದ ಆಡಳಿತ ನಡೆಯುತ್ತಿಲ್ಲ. ಅಲ್ಲಲ್ಲಿ ಕೆಲವು ವಿದ್ಯಾಸಂಸ್ಥೆಗಳಿಂದ ನಡೆಯುತ್ತಿದೆ. ಸರ್ಕಾರದಿಂದ, ಕೆಲವು ಮಂಡಳಿಗಳಿಂದ ನಡೆಯತಕ್ಕದ್ದಲ್ಲದೆ ಖಾನಗಿಯಾಗಿ ಕೂಡ ಪ್ರಾಥಮಿಕ ವಿದ್ಯಾಭ್ಯಾಸ ನಡೆಯುತ್ತಿದೆ. ಇದನ್ನು ಏಕರೂಪತೆಗೆ ತರುವುದಕ್ಕೆ ಏನೂ ಪ್ರಯತ್ನಗಳು ನಡೆದಿಲ್ಲ.

ಮತ್ತೊಂದು ವಿಚಾರ ವೇನೆಂದರೆ ನಮ್ಮ ರಾಜ್ಯಾಂಗದ ಪ್ರಕಾರ ಕಡ್ಡಾಯವಾದ ಪ್ರಾಥಮಿಕ ಶಿಕ್ಷಣ ಮಕ್ಕಳಿಗೆ ಆರುವರ್ಷದಿಂದ ಹಿಡಿದು 14 ವರ್ಷದವರೆಗೆ ಆಗಲೇಬೇಕು ಎಂದಿದೆ. ಈವಾಗ ನಾವು 11 ವರ್ಷದವರೆಗೂ ಕಡ್ಡಾಯ ಶಿಕ್ಷಣವನ್ನು ಕೊಡೋಣವೆಂದು ಹೊರಟಿದ್ದೇವೆ. ಮೊದಲನೆಯ ವರ್ಷ ಆರರಿಂದ ಏಳು, ಎರಡನೆಯ ವರ್ಷ ಆರರಿಂದ ಎಂಟು, ಮೂರನೆಯ ವರ್ಷ ಆರರಿಂದ ಒಂಬತ್ತು ವರ್ಷ ವಯಸ್ಸಾಗಿರುವ ಮಕ್ಕಳಿಗೆ ಹೀಗೆ ಹೆಚ್ಚಿಸಿಕೊಂಡು ಕಡ್ಡಾಯ ಶಿಕ್ಷಣವನ್ನು ಸಮಸ್ತರಿಗೂಕೊಡಬೇಕೆಂದು ಪ್ರಯತ್ನ ಮಾಡಿದ್ದೇವೆ. ಯಾವ ಯಾವ ವರ್ಷ ಯಾವ ಯಾವ ವಿದ್ಯಾರ್ಥಿಗಳಿಗೆ ಕಡ್ಡಾಯ ಮಾಡಬೇಕು ಎನ್ನುವುದನ್ನು ನಮ್ಮ ಶಿಕ್ಷಣದ ಕಾನೂನಿನಲ್ಲಿ ಮತ್ತು ಅದರ ಮೇಲೆ ಮಾಡಿರತಕ್ಕ ನಿಬಂದನೆಗಳಲ್ಲಿ ಗೊತ್ತುಮಾಡಿದ್ದೇವೆ. ಆದರೆ ಕಡ್ಡಾಯ ಶಿಕ್ಷಣವನ್ನು ದೇಶದ ಎಲ್ಲ ಕಡೆಯೂ ಜಾರಿಗೆ ತಂದಿದ್ದೇವೆಂದು ಹೇಳಿಕೊಂಡರೂ ಅದು ನಿಜವಾಗಿ ಜಾರಿಗೆ ಬಂದಿದೆಯೋ ಎನ್ನತಕ್ಕ ಪ್ರಶ್ನೆಗೆ ನಾವು ಉತ್ತರ ಹೇಳಬೇಕಾಗುತ್ತದೆ. ಅದು ಸಂಪೂರ್ಣವಾಗಿ ಜಾರಿಗೆ ಬಂದಿಲ್ಲ. ಜಾರಿಗೆ ಬಂದಿದೆ ಎಂದು ಹೇಳುತ್ತೇವೆ. ಅದು ಜಾರಿಗೆ ಬರಬೇಕಾದರೆ ಏನು ಕಟ್ಟುನಿಟ್ಟಾದ ನಿಯಮಗಳಿರಬೇಕೋ, ಏನು ಸೌಕರ್ಯಗಳುಂಟಾಗಬೇಕೋ ಆ ಕಟ್ಟುನಿಟ್ಟಾದ ನಿಯಮಗಳಾಗಲೀ ಸೌಕರ್ಯಗಳಾಗಲೀ ಇಲ್ಲ. ಕಾನೂನಿನಲ್ಲಿ ಮಾತ್ರ ನಾವು ಸ್ಪಷ್ಟವಾಗಿ ಹೇಳಿಬಿಟ್ಟಿದ್ದೇವೆ. ಏನೆಂದರೆ:

Section 3 of the Act:

> "No order should be made in respect of any area unless the State Government is satisfied that necessary facilities have been provided in that area for imparting primary education to all children".

ಆ ದೃಷ್ಟಿಯಿಂದ ನಾವು ವಿಚಾರ ಮಾಡಿದರೆ ಎಲ್ಲ ಕಡೆಯೂ ಕೂಡ ಏನೊಂದು ಸೌಕರ್ಯಗಳಾಗಬೇಕಾಗಿತ್ತೋ ಅದೆಲ್ಲಾ ಆಗದೆ ಇದ್ದರೂ ಕೂಡ ನಾವು ಈ ಆರ್ಡರನ್ನು ಜಾರಿಗೆಕೊಟ್ಟು 19 ಜಿಲ್ಲೆಗಳಲ್ಲಿಯೂ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡಿದ್ದೇವೆ ಎಂದು ಅಪ್ಪಣೆಕೊಡಿಸುತ್ತಿದ್ದೀರಿ.

ಮತ್ತೊಂದು ವಿಚಾರ ನಮ್ಮ ಕಡ್ಡಾಯ ಶಿಕ್ಷಣದ ಕಾನೂನಿನಲ್ಲಿ ಹೇಳಿದ್ದಾರೆ. ಏನೆಂದರೆ ಪ್ರತಿಯೊಂದು ಜಿಲ್ಲೆಯಿಂದಲೂ ಕೂಡಿ ಪ್ರತಿ ವರ್ಷವೂ ಕೂಡ ಸ್ಕೀಮುಗಳು ಏನೇನು ಇವೆ. ಏನು ಅಗತ್ಯವಾದ ಏರ್ಪಾಡುಗಳಾಗಬೇಕೋ ಅದಕ್ಕೆ ತಕ್ಕಂತೆ ವರದಿಗಳನ್ನು ತರಿಸಿಕೊಂಡು ಅದರ ಮೇಲೆ ಸರಕಾರದವರು ನಿರ್ಣಯವನ್ನು ಮಾಡಿ ಆ ಸೌಕರ್ಯಗಳನ್ನು ಒದಗಿಸಿ ಕೊಡುತ್ತಾರೆನ್ನುವುದು ಆ ಸ್ಕೀಮುಗಳ ಪ್ರಕಾರ ಪ್ರತಿ ವರ್ಷವೂ ಪ್ರತಿಯೊಂದು ಜಿಲ್ಲೆಯಲ್ಲಿಯೂ ಸ್ಕೂಲುಗಳು ಪ್ರಾರಂಭವಾಗಬೇಕಾಗಿತ್ತು. ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿರುವಾಗ ಸ್ಕೂಲುಗಳ ಸಂಖ್ಯೆಯೂ ಹೆಚ್ಚಾಗಬೇಕು. ಹೆಚ್ಚಾಗುತ್ತಿರುವ ಮಕ್ಕಳಿಗೆ ಅನುಕೂಲ ಮಾಡುವುದಕ್ಕೋಸ್ಕರ ಹೊಸದಾಗಿ ಏರ್ಪಾಡು ಮಾಡಿ ಸ್ಕೂಲುಗಳ ಸಂಖ್ಯೆಯನ್ನು ಹೆಚ್ಚು ಮಾಡಬೇಕು, ಅದಕ್ಕೆ ತಕ್ಕಂತೆ ಉಪಾಧ್ಯಾಯರುಗಳ ಸಂಖ್ಯೆಯನ್ನು ಹೆಚ್ಚಿಗೆ ಮಾಡಿ ಒದಗಿಸಿ ಕೊಡಬೇಕು, ಮತ್ತು ಎಲ್ಲ ಭಾಗದಿಂದಲೂ ಸ್ಕೀಮುಗಳನ್ನು ತರಿಸಿಕೊಂಡು ಅದರಂತೆ ಜಾರಿಗೆ ಕೊಡಬೇಕು ಎನ್ನತಕ್ಕದ್ದು.

ಇನ್ನೂ Section (4) VIರಲ್ಲಿ ಏನು ಹೇಳುತ್ತಾರೆಂದರೆ—

> "No sanction shall be accorded in respect of any schemes unless the State Government is satisfied that necessary facilities have been provided."

ಒಂದು ಪೇಳೆ ಕೊಡಬೇಕಾದ ಎಲ್ಲ ಸೌಕರ್ಯಗಳನ್ನೂ ಒದಗಿಸದೇ ಇದ್ದರೆ ಈ ಕಂಪಲ್ಸರಿ ಎಜುಕೇಷನ್‌ನ ಆರ್ಡರನ್ನು ಕೊಡಕೂಡದೆಂದು ಹಾಗಿದೆ. ಆದರೂ ಸಹ ನಾವು ಕಂಪಲ್‌ಸರಿ ಎಜುಕೇಷನ್ನು ಜಾರಿಗೆ ಕೊಟ್ಟುಬಿಟ್ಟಿದ್ದೇವೆ. ಅಲ್ಲದೇ ಪ್ರತಿಯೊಂದು ಊರಿಗೂ, ಪ್ರತಿಯೊಂದು ತಾಲ್ಲೂಕಿಗೂ ಅಟೆಂಡೆನ್ಸ್ ಆಫೀಸರೆಂದು ಮಾಡಲೇಬೇಕು. ಈ ಅಟೆಂಡೆನ್ಸ್ ಆಫೀಸರು ಪ್ರತಿಯೊಂದು ಸ್ಕೂಲಿನಲ್ಲಿಯೂ ಸೇರಬೇಕಾದ ಮಕ್ಕಳ ಸಂಖ್ಯೆ ಎಷ್ಟು, ಯಾರು ಯಾರು ಸೇರಿದ್ದಾರೆ, ಯಾರು ಯಾರು ಸೇರಿಲ್ಲ, ಅಟೆಂಡಿನ್ಸ್ ರಿಜಿಸ್ಟರು ಪ್ರಕಾರ ಎಷ್ಟು ಮಕ್ಕಳು ಬರುತ್ತಿದ್ದಾರೆ, ಕಾನೂನು ಪ್ರಕಾರ ಬರುತ್ತಿದ್ದಾರೆಯೇ, ಇಲ್ಲದಿದ್ದರೆ, ಬಾರದೆ ಇರುವುದಕ್ಕೆ ಕಾರಣವೇನು ? ಎನ್ನುವ ತಕ್ಕದ್ದನ್ನೆಲ್ಲಾ ಅಟೆಂಡೆನ್ಸ್ ಆಫೀಸರುಗಳು ನಿಗಾ ಇಟ್ಟು ಕೆಲಸ ಮಾಡಬೇಕೆಂದು ಈ ಆಫೀಸರುಗಳನ್ನು ನೇಮಕ ಮಾಡಿದ್ದಾರೆ. ಆದರೆ ಈಗ ಅಟೆಂಡೆನ್ಸ್ ಆಫೀಸರುಗಳೆಂದು ಮಾಡಿರುವವರ ಸಂಖ್ಯೆ ಸಾಲದು ನೂರು ನೂರೈವತ್ತು ಮೈಲಿಗಳಷ್ಟಿರುವ ಒಂದೊಂದು ತಾಲ್ಲೂಕಿಗೆ ಒಂದು ಅಟೆಂಡೆನ್ಸ್ ಆಫೀಸರು ಎಂದು ಮಾಡಿದರೆ ಅವರೇನೂ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಲೇ ಬೇಕಾಗಿದೆ. ಕಂಪಲ್ಸರಿ ಎಜುಕೇಷನ್ನು ಸ್ಕೀಮಿನಂತೆ ಇಷ್ಟು ಮಟ್ಟಿಗೆ ನಡೆಯಬೇಕು, ಇಷ್ಟು ಮಟ್ಟಿಗೇ ಆಗಬೇಕು ಎನ್ನುವ ಮಹೋದ್ದೇಶದಿಂದ ಏನು ಸಾಧನೆ ಮಾಡಬೇಕೆಂದು ಇದ್ದರೋ ಅದರಂತೆ ಸಾಧನೆಯಾಗಲಿಲ್ಲ. ಆ ಕಾರ್ಯ ಸಾಧನೆಯಾಗದೇ ಹೋದರೆ, ಆಗಬೇಕಾದ ಕಾರ್ಯವೂ ಕುಂಠಿತವಾಗುತ್ತದೆ. ಎಷ್ಟು ತ್ವರಿತವಾಗಿ ಕೆಲಸಗಳು ನಡೆಯಬೇಕಾಗಿತ್ತೋ ಹಾಗೆ ನಡೆಯುತ್ತಿಲ್ಲ ಎಂದು ಇಲ್ಲಿ ಹೇಳ ಬಯಸುತ್ತೇನೆ. ಅನೇಕ ಊರುಗಳಲ್ಲಿ ಶಾಲೆಗಳೇ ಇಲ್ಲ. ಊರುಗಳಲ್ಲಿ ಶಾಲೆಗಳೇ ಇಲ್ಲದಿದ್ದ ಮೇಲೆ ಅಲ್ಲಿ ಕಂಪಲ್‌ಷನ್ ಎನ್ನತಕ್ಕ ಮಾತಿಗೆ ಅರ್ಥವಿಲ್ಲ. ಮಕ್ಕಳಿಗೆ ಸ್ಕೂಲುಗಳನ್ನು ಒದಗಿಸದೇ ಕಂಪಲ್‌ಷನ್ ಎಂದರೆ ಹೇಗೆ ? ಮೊನ್ನೆ ತಾನೇ ಈ ಮಾನ್ಯ ಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರವಾಗಿ ಹೊಸಕೋಟೆ ತಾಲ್ಲೂಕಿನಲ್ಲಿರುವ ಐದಾರು ಗ್ರಾಮಗಳಲ್ಲಿ ಸ್ಕೂಲುಗಳೇ ಇಲ್ಲ ಎಂದು ಮಾನ್ಯ ಸಚಿವರು ಹೇಳಿದರು. ಹಾಗೆ ಎಷ್ಟೋ ತಾಲ್ಲೂಕಿನಲ್ಲೂ ಇವೆ. ಇದರಲ್ಲಿ ಇನ್ನೊಂದು ಇದೆ. ಎಷ್ಟೋ ಊರುಗಳಲ್ಲಿ ಸ್ಕೂಲುಗಳೇ ಇಲ್ಲ. ಒಂದು ಮೈಲಿ ದೂರದೊಳಗೆ ಒಂದು ಊರಿನಲ್ಲಿ ಸ್ಕೂಲಿದ್ದರೆ ಅಲ್ಲಿಗೆ ಮಕ್ಕಳು ಹೋಗಿ ಬರಬಹುದು. ಹಾಗಿಲ್ಲದೇ ಎಷ್ಟೋ ಮೈಲಿಗಳ ದೂರದಲ್ಲಿರುವ ಸ್ಕೂಲುಗಳಿಗೆ ಕಡ್ಡಾಯವಾಗಿ ಮಕ್ಕಳನ್ನು ಕಳುಹಿಸುವುದಕ್ಕೆ ಸಾಧ್ಯವಿಲ್ಲ. ಅದರಲ್ಲೂ ಕೂಡ ಆರೇಳು ವರ್ಷಗಳ ಮಕ್ಕಳು ಒಂದು ಮೈಲಿಯಷ್ಟು ದೂರವಿರತಕ್ಕ ಸ್ಕೂಲುಗಳಿಗೆ ಹೋಗಬೇಕೆಂದರೆ ಅದು ಸಾಧ್ಯವಿಲ್ಲದ ಮಾತು. ಅನೇಕ ಸಂದರ್ಭಗಳಲ್ಲಿ ಒಂದು ಮೈಲಿ ದೂರದಲ್ಲೇ ಮಧ್ಯದಲ್ಲಿ ಎಷ್ಟೋ ಹಳ್ಳಕೊಳ್ಳಗಳು, ಕೆರೆ ಕಟ್ಟೆಗಳು ಇರುವುದರಿಂದ ಅಲ್ಲಿಯೂ ಕೂಡ ಹೋಗುವುದಕ್ಕೆ ಆಗುವುದಿಲ್ಲ. ಹೀಗಾಗುವುದರಿಂದ ಕಡ್ಡಾಯ ಶಿಕ್ಷಣ ಎಂದು ಯಾರಾದರೂ ಇದನ್ನು ಭಾವಿಸಿದರೆ ಅದು ನ್ಯಾಯವಲ್ಲವೆಂದಾಗುತ್ತದೆ. ಕಡ್ಡಾಯವೆಂದು ಏನು ಮಾಡಿದ್ದಾರೆ ಅದು ಹೆಸರಿಗೆ ಮಾತ್ರವಿದೆಯೇ ಹೊರತು ನಿಜವಾಗಿಯೂ ಕೂಡ ಏನೂ ಆಗಿಲ್ಲ. ಇಲ್ಲ ಒಂದು ವಿಚಾರ ಹೇಳದೆ ವಿಧಿಯಿಲ್ಲ. ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದ ಮೇಲೆ ಮಕ್ಕಳ ಸಂಖ್ಯೆ ಜಾಸ್ತಿಯಾಗುತ್ತ ಬರುತ್ತದೆ. ಅಲ್ಲದೆ ಕಾನೂನಿಗೆ ಹೆದರಿ ಮುಂದೆನಾಗುತ್ತೋ ಎಂದು ತಂದೆ ತಾಯಿಗಳೂ ಮಕ್ಕಳನ್ನು ಸ್ಕೂಲಿಗೆ ಕಳುಹಿಸುತ್ತಾರೆ. ಆದರೆ ಸ್ಕೂಲಿಗೆ

(ಶ್ರೀ ಟಿ. ಮಾದಯ್ಯಗೌಡ)

ಹೋಗುವ ಮಕ್ಕಳೂ ಬಹು ಕಡಿಮೆ ಸಂಖ್ಯೆಯಲ್ಲಿವೆ. ಹೆಚ್ಚು ಸಂಖ್ಯೆಯಲ್ಲಿ ಮಕ್ಕಳು ಸ್ಕೂಲಿಗೆ ಹೋಗುತ್ತಿದ್ದಾರೆ. ಕಡ್ಡಾಯ ಶಿಕ್ಷಣ ಬಂದಿರುವುದರಿಂದ ಎಂದು ಹೇಳುವುದಕ್ಕಾಗುವುದಿಲ್ಲ. ಎಲ್ಲಿ ನೂರಕ್ಕೆ ನೂರರಷ್ಟು ಸಂಖ್ಯೆಯಲ್ಲಿ ಮಕ್ಕಳು ಹೋಗುತ್ತಿದ್ದಾರೋ ಅದು ಕಡ್ಡಾಯ ಶಿಕ್ಷಣವಾಗುತ್ತದೆ. ಆದರೆ ನೂರಕ್ಕೆ ತೊಂಭತ್ತರಷ್ಟು ಮಕ್ಕಳು ಸ್ಕೂಲಿಗೆ ಹೋಗದೇ ಇದ್ದರೆ ಅದು ಕಡ್ಡಾಯ ಶಿಕ್ಷಣವಾಗಲಾರದು. ಕಡ್ಡಾಯ ಶಿಕ್ಷಣವೆನ್ನುವುದು ಇನ್ನೂ ಸಂಪೂರ್ಣವಾಗಿ ಜಾರಿಗೆ ಬಂದಿಲ್ಲ. ಹಾಗಿದ್ದರೂ ನುಮ್ಮನೆ ಜಾರಿಗೆ ಕೊಡುತ್ತೇವೆಂದು ಹೇಳುವುದು ಸರಿಯಲ್ಲ ಎಂದು ನಾನು ಅಭಿಪ್ರಾಯ ಪಡುತ್ತೇನೆ.

ಮತ್ತೊಂದು ವಿಚಾರವನ್ನು ಈ ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ. ಅನೇಕ ಗ್ರಾಮಗಳ ಶಾಲೆಗಳನ್ನು ನಾನು ಹೋಗಿ ನೋಡಿದ್ದೇನೆ. ಕಡ್ಡಾಯ ಶಿಕ್ಷಣ ಬಂದಿದೆ ಎಂದು ನಾಳೆ ನವ್ಮ ಮಕ್ಕಳನ್ನು ಸ್ಕೂಲಿಗೆ ಸೇರಿಸದೇ ಹೋದರೆ, ನಮಗೇನು ತೊಂದರೆಯಾಗುತ್ತದೋ ಎಂದು ಅನೇಕ ಜನ ತಂದೆ ತಾಯಿಗಳು ಅವರ ಮಕ್ಕಳನ್ನು ಸ್ಕೂಲಿಗೆ ಸೇರಿಸಿದ್ದಾರೆ. ಆದರೆ ಸ್ಕೂಲಿಗೆ ಸೇರಿದ್ದರೂ ಅಟೆಂಡೆನ್ಸ್ ಇಲ್ಲ. ಅಟೆಂಡೆನ್ಸ್, ಹೇಗಿದೆ ಎಂದು ಹೋಗಿ ನೋಡಿದರೆ ಅಟೆಂಡೆನ್ಸ್ ರಿಜಿಸ್ಟರಿನಲ್ಲಿ 60-70 ಮಕ್ಕಳೆಂದಿದ್ದಾರೆ. ಸ್ಕೂಲಿಗೆ ನರಾಸರಿ ಹತ್ತು ಹದಿನೈದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಹುಡುಗರೇ ಬರುತ್ತಿಲ್ಲ. ಆಲ್ಲಿರುವ ಉಪಾಧ್ಯಾಯರನ್ನು ಕೇಳಿದರೆ ಏನೋ ಒಂದು ನೆಪ ಹೇಳಿ ಹೋಗುತ್ತಿದ್ದಾರೆ ಎಂದು ಹೇಳುತ್ತಾರೆ, ಹೀಗೆ ಉಪಾಧ್ಯಾಯರಲ್ಲಿ ದೋಷವಿದೆಯೋ ಅಥವಾ ಮಕ್ಕಳಲ್ಲಿ ದೋಷವಿದೆಯೋ ಎನ್ನುವುದನ್ನೆಲ್ಲಾ ಅಟೆಂಡೆನ್ಸ್ ಆಫೀಸರು ಹೋಗಿ ಕೂಲಂಕಷವಾಗಿ ವಿಚಾರ ಮಾಡಬೇಕು. ಅನೇಕ ಸ್ಕೂಲುಗಳಲ್ಲಿ ಉಪಾಧ್ಯಾಯರ ಸಂಖ್ಯೆ ತೀರಾ ಕಡಿಮೆ ಇದೆ. ಕಂಪಲ್ಸರಿ ಎಜುಕೇಷನ್ ಸರಿಯಾದ ರೀತಿಯಲ್ಲಿ ಜಾರಿಗೆ ಬರಲಿಲ್ಲ ಎನ್ನುವುದಕ್ಕೆ ಹಿಂದೆ ಈ ಸಭೆಯಲ್ಲಿ ಒಂದು ಪ್ರಶ್ನೆಯನ್ನು ಒಬ್ಬ ಮಾನ್ಯ ಸದಸ್ಯರು ಕೇಳಿದ್ದರು ಅದು ಈ ರೀತಿ ಇದೆ.—

What are the facilities that are provided in implementing compulsory primary education in the State ?

The reply given is : 1751 additional schools are sanctioned during 1961-62. 233 additional schools are to be opened during 1962-63 and incentive schemes like mid-day meals, supply of books, slates, uniforms and attendance scholarships for girls are implemented. ಅವರು ಕಂಪಲ್ಸರಿ ಎಜುಕೇಷನ್ನು ಪ್ರೈಮರಿ ಎಜುಕೇಷನ್ನು ಜಾರಿಗೆ ತಂದಿದ್ದೇವೆ ಆದಕ್ಕಾಗಿ mid-day meals, ಸ್ಲೇಟುಗಳು, ಬುಕ್ಕುಗಳು ಎಲ್ಲಾ ಕೊಡುತ್ತೇವೆಂದು ಹೇಳುತ್ತಾರೆ. ಇದು ಎಲ್ಲೋ ಕಲ ಕೆಲವು ಭಾಗಗಳಲ್ಲಿ mid-day meals, ಹುಡುಗರಿಗೆ ಪುಸ್ತಕಗಳೂ ಸ್ಲೇಟುಗಳು ಎಂದು ಕೊಡುತ್ತಿದ್ದಾರೆ. ಅಲ್ಲದೆ attendance scholarships ಎಂದು ಬೇರೆ ಕೊಡುತ್ತಿದ್ದಾರೆ. ಇದು ಎಷ್ಟು ಜನಕ್ಕೆ ಸಿಗುತ್ತೆ ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ. ಸ್ಕೂಲುಗಳನ್ನು ಜಾಸ್ತಿ ಮಾಡುವಂತೆ ಉಪಾಧ್ಯಾಯರನ್ನೂ ಜಾಸ್ತಿ ಮಾಡಿಲ್ಲ, ಅದರಿಂದ ಈ ದೇಶದಲ್ಲಿ ಕಂಪಲ್ಸರಿ ಎಜುಕೇಷನ್ ಸಂಪೂರ್ಣವಾಗಿ ಜಾರಿಗೆ ಬಂದಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಯಾವಾಗಲೂ ಎಲ್ಲ ಸೌಕರ್ಯಗಳನ್ನು ಕೊಡುತ್ತೇವೆಂದು, ಕಾನೂನಿನಲ್ಲಿ ಹೇಳಿಕೆಯಲ್ಲಿ ಸೌಕರ್ಯಗಳನ್ನು ಕೊಡಬೇಕೆಂದು ಹೇಳಿವ್ಹಾರೆ. ಅದರಂತೆ ಮಕ್ಕಳು ಸ್ಕೂಲಿಗೆ ಬರುತ್ತಿದ್ದಾರೆ. ಒಂದು ವೇಳೆ ತಡವಾಗುವಂತಿದ್ದರೆ, ಕಂಪಲ್ಸರಿ ಎಜ್ಯುಕೇಷನ್ ಎನ್ನುವುದರ ಉದ್ದೇಶವೇ ಸರಿಯಾಗುವುದಿಲ್ಲ.

Mr. SPEAKER.—The House will now rise for Half an Hour.

The House adjourned for recess at Three of the Clock and re-assembled at Thirty Minutes past Three of the Clock.